ಈ) ಔಷಧಿಗ ನ್ನು ನೀಗಿಸಲು ಸರ್ಕಾರ ತೆಗೆದುಕೊಂಡಿರುವ ಕಾರ್ಯಕ್ರಮಗಳೇನು?

ಉ) ಈ ಹೈಟೆಕ್ ಆಸ್ಪತ್ರೆಯಲ್ಲಿ ಪ್ರಯೋಗಾಲಯ ರಕ್ತನಿಧಿ ಕೇಂದ್ರ ಮತ್ತು ತಂತ್ರಜ್ಞಾನ ಪ್ರಯೋಗಾಲಯ ಅಳವಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಊ) ಈ ಆಸ್ಪತ್ರೆಯಲ್ಲಿ ಒ.ಟಿ. (ಶಸ್ತ್ರ ಚಿಕಿತ್ಸೆ) ಕಾರ್ಯ ನಿರ್ವಹಿಸುತ್ತಿರಲು ಕಾರಣಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರ ಶುಶ್ರೂಷಕಿ ಮತ್ತು ಇತರೆ ಕಛೇರಿ ಸಿಬ್ಬಂದಿಗಳ ಕೊರತೆಯಿರುವುದಿಲ್ಲ. ಎಲ್ಲಾ ಹುದ್ದೆಗಳು ಭರ್ತಿಯಾಗಿರುತ್ತದೆ.

ಆ) ಅನ್ವಯಿಸುವುದಿಲ್ಲ

ಇ) ಮೆ: ಶಿವಶಕ್ತಿ ಎಂಟರ್‌ಪ್ರೈಸಸ್ ಲೇಬರ್ ಮತ್ತು ಹೌಸಿಂಗ್ ಕ್ರೆನಿಂಗ ಕಾಂಟ್ರಾಕ್ಟರ್ಸ್ ವಿಜಯಪುರ, ಇವರಿಗೆ ಹೊಣೆಗಾರಿಕೆಯನ್ನು ವಹಿಸಲಾಗಿದೆ.

ಈ) ಔಷಧಿಗಳು 2002–03ನೇ ಸಾಲಿನಲ್ಲಿ ಶೇಕಡ 40 ರಷ್ಟು ಸರ್ಕಾರಿ ಔಷಧಿ ಮಳಿಗೆಯಿಂದ ಸದರಿ ಆಸ್ಪತ್ರೆಗೆ ಸರಬರಾಜು ಮಾಡಿರುತ್ತಾರೆ. ಶೇ. 60ರಷ್ಟು ಔಷಧ ಮತ್ತು ರಾಸಾಯನಿಕಗಳನ್ನು ಇನ್ನು ಒದಗಿಸಬೇಕಾಗಿದೆ.

ಉ) ರಕ್ತನಿಧಿ ಕೇಂದ್ರ ಸ್ಥಾಪಿಸುವ ಬಗ್ಗೆ ಪ್ರಸ್ತಾವನೆ ಇರುವುದಿಲ್ಲ. ಪ್ರಯೋಗಶಾಲಾ ಸೇವೆ ಲಭ್ಯವಿದೆ.

ಊ) ಅರವಲಿಕೆ ತಜ್ಞರ ಹುದ್ದೆಯು ಮಂಜೂರಾಗಿರುವುದಿಲ್ಲ.

ಗುಲ್ಬರ್ಗಾ ಜಿಲ್ಲೆಯ, ಸೇಡಂ ಕ್ಷೇತ್ರದ ಕುಡಿಯುವ ನೀರಿನ ಮೋಟಾರುಗಳನ್ನು ದುರಸ್ತಿಗೊಳಿಸುವ ಬಗ್ಗೆ

2879 (2897) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ, ಸೇಡಂ ಕ್ಷೇತ್ರದಲ್ಲಿ ಕುಡಿಯುವ ನೀರಿನ ಮೋಟಾರುಗಳು ಸುಟ್ಟುಹೋದರೆ ಹಳೆಯ ಮೋಟಾರುಗಳನ್ನು ದುರಸ್ತೆ ಮಾಡಿ ಹೊಸ ಮೋಟಾರುಗಳೆಂದು ತೋರಿಸುವುದು ನಿಜವಲ್ಲವೇ;

ಆ) ಒಂದು ವೇಳೆ ಹೊಸ ಮೋಟಾರುಗಳನ್ನು ದುರಸ್ತೆ ಮಾಡಿಸಿ ಹಳೆಯ ಮೋಟಾರುಗಳನ್ನು ತಮ್ಮ ಕಾರ್ಯಾಲಯದಲ್ಲಿ ಶೇಖರಿಸಲಾಗಿದೆಯೇ; ಅವುಗಳ ಸಂಖ್ಯೆ ಎಷ್ಟು;

ಇ) ಒಂದು ವೇಳೆ ಮೋಟಾರುಗಳನ್ನು ದುರಸ್ತಿ ಮಾಡಿಸಿ ಹಳೆಯ ಮೋಟಾರುಗಳೆಂದು ಜೋಡಿಸಿದರೆ ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು): ಅ) ಇಲ್ಲಾ

ಆ) ಹೌದು. ಹಳೆಯ ಮೋಟಾರುಗಳನ್ನು ದಾಸ್ತಾನಿನಲ್ಲಿರಿಸಲಾಗಿದೆ.

ಇ) ಇಂತಹ ಪ್ರಕರಣಗಳು ಸೇಡಂ ತಾಲ್ಲೂಕಿನ ಯಾವುದೇ ಗ್ರಾಮ ಪಂಚಾಯತಿಗಳಲ್ಲಿ

ವರದಿಯಾಗಿಲ್ಲ.

ಗುಲ್ಬರ್ಗಾ ಜಿಲ್ಲೆ ಸೇಡಂ ಕ್ಷೇತ್ರದ ಕುಡಿಯುವ ನೀರಿನ ಸಮಸ್ಯೆ ಬಗ್ಗೆ

2880 (3263) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ಚಿತ್ತಾಪೂರ ತಾಲ್ಲೂಕಿನ 11 ಗ್ರಾಮಗಳು ಹಾಗೂ 20 ತಾಂಡಾಗಳಿಗೆ ಜಿಲ್ಲಾ ಪಂಚಾಯತಿಯ ಇಂಜಿನಿಯರಿಂಗ್ ಉಪವಿಭಾಗ, ಚಿತ್ತಾಪೂರದವರು ಕುಡಿಯುವ ನೀರಿನ ಯೋಜನೆಗಳಿಗಾಗಿ ಅಭಾವ ಪರಿಹಾರ ಹಣದಲ್ಲಿಯಾಗಲೀ ಜಿಲ್ಲಾ ಪಂಚಾಯತ್ ಯೋಜನೆಯ ಹಣದಲ್ಲಿಯಾಗಲಿ, ಸರ್ಕಾರದ ವಿಶೇಷ ಅನುದಾನದಲ್ಲಿಯಾಗಲೀ 2001–02, 2002–03ನೇ ಸಾಲಿನಲ್ಲಿ ಖರ್ಚಾಗಿರುವ ಹಣವೆಷ್ಟು;

ಆ) ಹಣ ಖರ್ಚಾದರೆ ಯಾವ ಯಾವ ಗ್ರಾಮಗಳಲ್ಲಿ ಯಾವ ಯಾವ ಯೋಜನೆಗೆ ಪೈಪ್ ವಾಟರ್ ಸರಬರಾಜು, ಕಿರಿ ನೀರು ಸರಬರಾಜು ಯೋಜನೆ, ಕೊಳವೆ ಬಾವಿಗಳು ಇನ್ನಿತರ ಯೋಜನೆಗಳ ವಿವರ ಕಾಮಗಾರಿವಾರು; ಗ್ರಾಮವಾರು ಮಾಹಿತಿ ನೀಡುವುದು;

ಇ) ಹಣ ಖರ್ಚಾಗಿದ್ದರೂ ಸಹ ಇನ್ನೂ ಕುಡಿಯುವ ನೀರಿನ ತೊಂದರೆ ಇರುವ ಗ್ರಾಮಗಳ ಹೆಸರು; ಈ ಗ್ರಾಮಗಳಲ್ಲಿ ಇಲ್ಲಿಯವರೆಗೆ ಕುಡಿಯುವ ನೀರಿಗಾಗಿ ಖರ್ಚಾಗಿರುವ ಹಣವೆಷ್ಟು;

ಈ) ಈ ಹಣ ಖರ್ಚಾದರೂ ಸಹ ಕುಡಿಯುವ ನೀರಿನ ಯೋಜನೆಗಳು ಪೂರ್ತಿಯಾಗದೇ ಇರುವುದು ಏಕೆ; ಇವುಗಳನ್ನು ಪೂರ್ತಿಗೊಳಿಸಿ ಈ ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು ಯಾವಾಗ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಅ, ಆ) ರೂ. 52.11 ಲಕ್ಷ ಅನುದಾನ ವೆಚ್ಚವಾಗಿರುತ್ತದೆ. ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಇ) ಪ್ರಸ್ತುತ ಸೇಡಪ ಮತ ಕ್ಷೇತ್ರದ 11 ಗ್ರಾಮ ಮತ್ತು 20 ತಾಂಡಗಳಲ್ಲಿ ಕುಡಿಯುವ ನೀರಿನ ತೊಂದರೆ ಇರುವುದಿಲ್ಲ.

ಈ) ಸದರೀ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಕೈಗೊಂಡ ಎಲ್ಲಾ ಕುಡಿಯುವ ನೀರಿನ ಯೋಜನೆಗಳು ಪೂರ್ಣಗೊಂಡಿದೆ. ಬೆಳಗೆರಾ ಗ್ರಾಮದ ಕಿರು ನೀರು ಸರಬರಾಜು ಯೋಜನೆ ಜಲ ಮೂಲದ ತೊಡಕಿನಿಂದ ಕಾಮಗಾರಿ ಕೈಗೆತ್ತಿಕೊಂಡಿಲ್ಲ. ಆದಾಗ್ಯೂ ಬೆಳಗೆರಾ ಗ್ರಾಮಕ್ಕೆ ಮೊದಲಿನ ಕಿರು ನೀರು ಸರಬರಾಜು ಯೋಜನೆಯಿಂದ ಅಗತ್ಯ ನೀರು ಸರಬರಾಜು ಮಾಡಲಾಗುತ್ತಿದೆ.

ಕರ್ನಾಟಕ ವಿಧಾನ ಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 3263ರ ಉತ್ತರದ ಲಗತ್ತು

ಅನುಬಂಧ–1

ಸೇಡಂ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ 2001–02, 2002–03ರ ಸಾಲಿನಲ್ಲಿ ಕೈಗೊಂಡ ವಿವಿಧ ಕುಡಿಯುವ ನೀರು ಸರಬರಾಜು ಯೋಜನೆಗಳ ವಿವರ

(ರೂ. ಲಕ್ಷಗಳಲ್ಲಿ)

ಕ್ರ.ಸಂ.	ಗ್ರಾಮ/ಯೋಜನೆಯ ಹೆಸರು	ವರ್ಷ	ಶೀರ್ಷಿಕೆ	ವೆಚ್ಚ
1.	ದಂಡಗುಂಡ (ತೆರೆದ ಬಾವಿ ದುರಸ್ಥಿ)	2001–02	ಅಭಾವ ಪರಿಹಾರ	0.70